# ವಾಟ್ಸ್‌ಆ್ಯಪ್: ಫೆ.8ರಿಂದ ಹೊಸ ಸೇವಾ ನಿಯಮ

■ ಶಶಿಕುಮಾರ್ ಸಿ.

ಹೊಸ ವರ್ಷದ ಆರಂಭದಲ್ಲಿಯೇ ಫೇಸ್‌ಬುಕ್ ಒಡೆತನದ ವಾಟ್ಸ್‌ಆ್ಯಪ್ ತನ್ನ ಸೇವಾ ನಿಯಮಗಳಲ್ಲಿ ಬದಲಾವಣೆಗೆ ಆದ್ಯತೆ ನೀಡಿದೆ. ಆ ಬದಲಾವಣೆಯ ಭಾಗವಾಗಿ ತನ್ನ ಎಲ್ಲ ಬಳಕೆದಾರರಿಗೆ ಹೊಸ ನಿಯಮಗಳ ಕುರಿತು ನೋಟಿಫಿಕೇಷನ್‌ಗಳನ್ನು ಕಳುಹಿಸತೊಡಗಿದೆ.

‘ವಾಟ್ಸ್‌ಆ್ಯಪ್ ತನ್ನ ನಿಯಮಗಳು ಮತ್ತು ಗೌಪ್ಯತೆ ನೀತಿಯನ್ನು ಅಪ್‌ಡೇಟ್ ಮಾಡುತ್ತಿದೆ’ ಎಂಬ ಬರಹವುಳ್ಳ ನೋಟಿಫಿಕೇಷನ್ ಅನ್ನು ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಆಧಾರಿತ ಸ್ಮಾರ್ಟ್ ಫೋನ್‌ನಲ್ಲಿನ ತನ್ನ ಬಳಕೆದಾರರಿಗೆ ವಾಟ್ಸ್‌ಆ್ಯಪ್ ಕಳುಹಿಸುತ್ತಿದೆ. ಈ ಹೊಸ ಪ್ರಕ್ರಿಯೆಯು ಈಗಾಗಲೇ ಚಾಲ್ತಿಯಲ್ಲಿದ್ದು, ಪ್ರತಿಯೊಬ್ಬ ವಾಟ್ಸ್‌ಆ್ಯಪ್ ಬಳಕೆದಾರರು ಕಂಪನಿಯ ‘ಅಪ್‌ಡೇಟ್ ವರ್ಷನ್’ ಅನ್ನು ಒಪ್ಪಿಕೊಂಡರೆ ಮಾತ್ರ ವಾಟ್ಸ್‌ಆ್ಯಪ್ ಬಳಕೆಗೆ ಅವಕಾಶವಿದೆ. ಇಲ್ಲವಾದರೆ ಬಳಕೆದಾರರ ವಾಟ್ಸ್‌ಆ್ಯಪ್ ಖಾತೆ ನಿಷ್ಕ್ರಿಯಗೊಳ್ಳಲಿದೆ.

ಕಂಪನಿಯು ತನ್ನ ಬಳಕೆದಾರರಿಗೆ ಏನೆಲ್ಲಾ ಸೇವೆಯನ್ನು ನೀಡುತ್ತಿದೆ, ಬಳಕೆದಾರರ ಮಾಹಿತಿಯನ್ನು ಹೇಗೆ ನಿರ್ವಹಿಸುತ್ತದೆ, ತಮ್ಮ ವಾಟ್ಸ್‌ಆ್ಯಪ್ ಚಾಟ್‌ಗಳನ್ನು ಹೇಗೆ ನಿರ್ವಹಿಸಲಾಗುತ್ತದೆ, ಫೇಸ್‌ಬುಕ್‌ನಲ್ಲಿ ಹೋಸ್ಟ್ ಮಾಡಿದ ವಿಷಯಗಳನ್ನು ಹೇಗೆ ತನ್ನ ವ್ಯಾಪಾರಕ್ಕೆ ಬಳಸಿಕೊಳ್ಳುತ್ತದೆ ಎಂಬ ಸಮಗ್ರ ಮಾಹಿತಿಯನ್ನು ವಾಟ್ಸ್‌ಆ್ಯಪ್‌ನ ಅಪ್‌ಡೇಟ್ ವರ್ಷನ್‌ನಲ್ಲಿ ತಿಳಿಸಲಾಗಿದೆ.

ನೋಟಿಫಿಕೇಷನ್ ಕಳುಹಿಸುವ ಮತ್ತು ಬಳಕೆದಾರರಿಂದ ಆ ನೋಟಿಫಿಕೇಷನ್‌ಗೆ ಒಪ್ಪಿಗೆ ಪಡೆಯುವ ಕಾರ್ಯವು ವಾಟ್ಸ್‌ಆ್ಯಪ್‌ನಿಂದ ಕಳೆದ ಜನವರಿ 5ರಿಂದಲೇ ಪ್ರಾರಂಭವಾಗಿದೆ. ಇದರಲ್ಲಿ ಗ್ರಾಹಕರಿಗೆ ಯಾವ ರೀತಿಯ ಗೌಪ್ಯತಾ ನೀತಿ ಹಾಗೂ ಸೇವಾನಿಯಮವನ್ನು ಜಾರಿಗೊಳಿಸಲಾಗುತ್ತಿದೆ ಎನ್ನುವ ಸಂಕ್ಷಿಪ್ತ ಮಾಹಿತಿ ಒದಗಿಸಲಾಗಿದೆ. ಫೇಸ್‌ಬುಕ್‌ನೊಂದಿಗೆ ವಾಟ್ಸ್‌ಆ್ಯಪ್ ಹೇಗೆ ಪಾಲುದಾರಿಕೆ ಹೊಂದಿದೆ ಎನ್ನುವ ವಿವರದೊಂದಿಗೆ, ಪ್ರಮುಖ ನವೀಕರಣಗಳನ್ನು ಅಧಿಸೂಚನೆಯಲ್ಲಿ ಉಲ್ಲೇಖಿಸಲಾಗಿದೆ.

2021ರ ಫೆಬ್ರವರಿ 8ರಿಂದಲೇ ವಾಟ್ಸ್‌ಆ್ಯಪ್‌ನ ಹೊಸ ನಿಯಮಗಳು ಮತ್ತು ಗೌಪ್ಯತೆ ನೀತಿಗಳು ಜಾರಿಗೆ ಬರಲಿವೆ. ಫೆಬ್ರವರಿ 8ರ ನಂತರ ಬಳಕೆದಾರರು ತಮ್ಮ ವಾಟ್ಸ್‌ಆ್ಯಪ್ ಖಾತೆಯನ್ನು ಬಳಸಲು ಈ ನಿಯಮಗಳು ಮತ್ತು ಬದಲಾವಣೆಗಳನ್ನು ಕಡ್ಡಾಯವಾಗಿ ಒಪ್ಪಿಕೊಳ್ಳಲೇಬೇಕಿದೆ. ಇಲ್ಲದೆ ಹೋದಲ್ಲಿ ಖಾತೆ ನಿಷ್ಕ್ರಿಯಗೊಳ್ಳಲಿದೆ. ಇದರಿಂದಾಗಿಯೇ ಬಳಕೆದಾರರು ವಾಟ್ಸ್‌ಆ್ಯಪ್‌ನ ಒಪ್ಪಂದವನ್ನು ಒಪ್ಪಿಕೊಳ್ಳಲೇಬೇಕಾದ ಸಂದಿಗ್ಧ ಸ್ಥಿತಿಗೆ ಸಿಲುಕಿದ್ದಾರೆ.




ಹೊಸ ಒಪ್ಪಂದದ ಬಗ್ಗೆ ಕೆಲವು ಬಳಕೆದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಮಗ್ರ ಮಾಹಿತಿಯನ್ನು ಸಾರ್ವಜನಿಕವಾಗಿ ಹಂಚಿಕೊಂಡ ನಂತರ ಹಾಗೂ ಬಳಕೆದಾರರಿಗೆ ಮನವರಿಕೆಯಾದ ನಂತರವಷ್ಟೇ ನೋಟಿಫಿಕೇಷನ್ ಕಳುಹಿಸುವ ಕಾರ್ಯ ಹಾಗೂ ಅದಕ್ಕೆ ಅನುಮತಿ ಪಡೆಯುವ ಕಾರ್ಯ ಮಾಡಬೇಕು ಎನ್ನುವುದು ಅವರ ಆಗ್ರಹ. ಈ ಒತ್ತಾಯದಿಂದಾಗಿ, ತನ್ನ ಹೊಸ ಸೇವಾ ನಿಯಮಗಳಲ್ಲಿ ಏನೆಲ್ಲಾ ಬದಲಾವಣೆಯಾಗಲಿದೆ ಎಂಬ ಮಾಹಿತಿಯನ್ನು ಬಳಕೆದಾರರ ಜೊತೆಗೆ ಮುಕ್ತವಾಗಿ ಹಂಚಿಕೊಳ್ಳುವ ಪ್ರಕ್ರಿಯೆಗೆ ವಾಟ್ಸ್‌ಆ್ಯಪ್ ಚಾಲನೆ ನೀಡಿದೆ.

ಮಾಹಿತಿ ಸಂಗ್ರಹಿಸುವ ವಿಚಾರಕ್ಕೆ ವಾಟ್ಸ್‌ಆ್ಯಪ್ ಹೆಚ್ಚಿನ ಆದ್ಯತೆ ನೀಡುವ ಸಾಧ್ಯತೆ ಇದೆ. ‘ಚಾಟ್‌ಗಳು, ವಿಡಿಯೊ ಹಾಗೂ ಫೋಟೊಗಳನ್ನು ಬಳಕೆದಾರರು ಫಾರ್ವರ್ಡ್ ಮಾಡುವ ವಿಷಯ, ಹೆಚ್ಚುವರಿ ಫಾರ್ವರ್ಡ್‌ಗಳನ್ನು ಪರಿಣಾಮಕಾರಿಯಾಗಿ ತಲುಪಿಸಲು ನಾವು ಅವುಗಳನ್ನು ನಮ್ಮ ಸರ್ವರ್‌ಗಳಲ್ಲಿ ಎನ್‌ಕ್ರಿಪ್ಟ್ ಮಾಡಿದ ರೂಪದಲ್ಲಿ ಸಂಗ್ರಹಿಸುತ್ತೇವೆ’ ಎಂದು ವಾಟ್ಸ್‌ಆ್ಯಪ್ ಹೇಳಿಕೊಂಡಿದೆ. ಇದಕ್ಕಾಗಿ ಕಂಪನಿಯು ಬಳಕೆದಾರರ ಸಂಪರ್ಕಗಳ ಬಗ್ಗೆ ವಿವರಗಳನ್ನು ನವೀಕರಿಸಲು ಮುಂದಾಗಿದೆ. ‘ನಿಮ್ಮ ಯಾವುದೇ ಸಂಪರ್ಕಗಳು ಇನ್ನು ನಮ್ಮ ಸೇವೆಗಳನ್ನು ಬಳಸದಿದ್ದರೆ, ಆ ಸಂಪರ್ಕಗಳನ್ನು ನಮ್ಮಿಂದ ಗುರುತಿಸಲಾಗುವುದಿಲ್ಲ ಎಂದು ಖಚಿತಪಡಿಸುವ ರೀತಿಯಲ್ಲಿ ನಾವು ಈ ಮಾಹಿತಿಯನ್ನು ನಿಮಗಾಗಿ ನಿರ್ವಹಿಸುತ್ತೇವೆ’ ಎಂದೂ ವಾಟ್ಸ್‌ಆ್ಯಪ್ ಹೇಳಿದೆ.

‘ಸಾಧನ ಮತ್ತು ಸಂಪರ್ಕ ಮಾಹಿತಿ’ ಮತ್ತು ‘ಸ್ಥಳ ಮಾಹಿತಿ’ ಅನ್ನು ವಾಟ್ಸ್‌ಆ್ಯಪ್ ಹೇಗೆ ನಿರ್ವಹಿಸುತ್ತದೆ ಎಂಬುದನ್ನು ಸಹ ವಿವರಿಸಿದೆ. ‘ನೀವು ನಮ್ಮ ಸೇವೆಗಳನ್ನು ಸ್ಥಾಪಿಸುವಾಗ, ಪ್ರವೇಶಿಸುವಾಗ ಅಥವಾ ಬಳಸುವಾಗ ನಾವು ಸಾಧನ ಮತ್ತು ಸಂಪರ್ಕ–ನಿರ್ದಿಷ್ಟ ಮಾಹಿತಿಯನ್ನು ಸಂಗ್ರಹಿಸುತ್ತೇವೆ. ಹಾರ್ಡ್‌ವೇರ್ ಮಾದರಿ, ಆಪರೇಟಿಂಗ್ ಸಿಸ್ಟಮ್ ಮಾಹಿತಿ, ಬ್ಯಾಟರಿ ಮಟ್ಟ, ಸಿಗ್ನಲ್ ಸಾಮರ್ಥ್ಯ, ಅಪ್ಲಿಕೇಶನ್ ಆವೃತ್ತಿ, ಬ್ರೌಸರ್ ಮಾಹಿತಿ, ಮೊಬೈಲ್ ನೆಟ್‌ವರ್ಕ್, ಸಂಪರ್ಕ ಮಾಹಿತಿ (ಫೋನ್ ಸಂಖ್ಯೆ, ಮೊಬೈಲ್ ಆಪರೇಟರ್ ಅಥವಾ ಐಎಸ್‌ಪಿ ಸೇರಿದಂತೆ), ಭಾಷೆ ಮತ್ತು ಸಮಯ ವಲಯ, ಐಪಿ ವಿಳಾಸ, ಸಾಧನ ಕಾರ್ಯಾಚರಣೆಗಳು ಮಾಹಿತಿ ಮತ್ತು ಗುರುತಿಸುವಿಕೆಗಳು’ – ಇವುಗಳನ್ನೆಲ್ಲ ಸಂಗ್ರಹಿಸುತ್ತೇವೆ ಎಂದು ವಾಟ್ಸ್‌ಆ್ಯಪ್ ಮಾಹಿತಿ ಹಂಚಿಕೊಂಡಿದೆ. ■

